**ಸಾಕ್ಷಿಗೆ ದಿನಾಂಕಃ 29.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ. ಎ.ಪಿ.ಎಸ್. ವಕೀಲರಿಂದಃ**

ನಿ.ಪಿ.1ರ ಮೂಲ ಪತ್ರ ಹಾಳಾಗಿರುತ್ತದೆ. ನಿಂಗಮ್ಮ ಅಲಿಯಾಸ್ ಮೊಳ್ಳೆ ನಿಂಗಮ್ಮ ಅನಕ್ಷರಸ್ಥರು ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ಸದರಿಯವರು ಹೆಬ್ಬೆಟ್ಟಿನ ರುಜು ಹಾಕಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ.14 ರಂತೆ ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ಈ ದಾವೆಯಲ್ಲಿ ನನ್ನ ಸಹೋದರ ಜ್ಞಾನೇಶ್ವರ್ ಡಿ. ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿ.ಪಿ.14 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವಿಭಾಗ ಮಾಡಿಕೊಳ್ಳಲು ನಮಗೆ ಯಾವುದೇ ಹಕ್ಕು, ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.14 ಕ್ಕೆ ಮಹದೇವಸ್ವಾಮಿ ಮತ್ತು ಮತ್ತೊಬ್ಬರು ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ನಿ.ಪಿ.14 ನ್ನು ಸುರೇಶ್ ಎನ್ನುವವರು ಬರೆದಿರುತ್ತಾರೆ. ನಿಂಗಮ್ಮ ಅಲಿಯಾಸ್ ಮೊಳ್ಳೆ ನಿಂಗಮ್ಮನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ.

ಬವರಮ್ಮ ಮತ್ತು ನಿಂಗಮ್ಮ ರವರು ಅತ್ತಿಗೆ ನಾದಿನಿ. ಬವರಮ್ಮ ಮತ್ತು ನಿಂಗಮ್ಮ ರವರು ದಾವಾ ಸ್ವತ್ತನ್ನು ಜಂಟಿಯಾಗಿ ಖರೀದಿ ಮಾಡಿದ್ದು, ಆದರೆ ನಿಂಗಮ್ಮನವರಿಗೆ ಮಕ್ಕಳಿಲ್ಲದ ಕಾರಣ ಗೊಜ್ಜೆ ಬೀರೇಗೌಡರ ಮಗ ಚೆನ್ನಬಸವಯ್ಯ ಅಲಿಯಾಸ್ ಸೈಯದ್ ಖಾದರ್ ರವರು ಅವರ ವಾರಸುದಾರರಾಗುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಂಗಮ್ಮ, ಬವರಮ್ಮ, ಬಸವೇಗೌಡ, ಬೀರಪ್ಪ ರವರ ಮರಣ ಪ್ರಮಾಣ ಪತ್ರ ನಮ್ಮ ಬಳಿ ಇದ್ದು, ಆದರೆ ಅದನ್ನು ಹಾಜರುಪಡಿಸಿರುವುದಿಲ್ಲ. ಮರಣ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯವರಿಂದ ಪಡೆದಿರುತ್ತೇವೆ. ಅವುಗಳನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದಕಾರಣ ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾವು ಕಂದಾಯವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಯು ಪಟ್ಟಾ ರಶೀದಿ ಪುಸ್ತಕವನ್ನು ಪಡೆದು ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನಾವುಗಳು ಅಥವಾ ನಮ್ಮ ತಂದೆ ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸೈಯದ್ ಖಾದರ್ ಅಲಿಯಾಸ್ ಚೆನ್ನಬಸವಯ್ಯ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿದ್ದು, ನಂತರ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿಯು ಸ್ವಾಧೀನ ಮತ್ತು ಸಾಗುವಳಿಯನ್ನು ದಾವಾ ಸ್ವತ್ತಿನಲ್ಲಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**